International Journal of Kannada Research
www.kannadajournal.com

ISSN: 2454–5813
IJKR 2020; 6(4): 26-28
© 2020 IJKR
www.kannadajournal.com
Received: 13-08-2020
Accepted: 16-09-2020

**ಡಾ. ಸಿ.ಎಸ್. ಕೆಂಡಗಣ್ಣೇಗೌಡ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ), ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ಸಿ.ಎಸ್. ಕೆಂಡಗಣ್ಣೇಗೌಡ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ), ಮೈಸೂರು, ಕರ್ನಾಟಕ, ಭಾರತ

# ವಚನಗಳಲ್ಲಿ 'ಗುರು'ವಿನ ಅಭಿವ್ಯಕ್ತಿ

**ಡಾ. ಸಿ.ಎಸ್. ಕೆಂಡಗಣ್ಣೇಗೌಡ**

ಮದ್ಯಕಾಲೀನ ಸಂದರ್ಭದಲ್ಲಿ ನಮ್ಮ ನಾಡಿನ ಶರಣ ಶರಣೆಯರು ರೂಪಿಸಿದ ಒಂದು ವಿಶಿಷ್ಟವಾದ ಸಾಹಿತ್ಯ ಪ್ರಕಾರ ವಚನ ಸಾಹಿತ್ಯ. ವಚನ ಎಂಬ ಶಬ್ಧಕ್ಕೆ ಮಾತು ಎನ್ನುವ ಅರ್ಥದೊಡನೆ ನುಡಿದಂತೆ ನಡೆಯುವ, ಪ್ರಾಮಾಣಿಕತೆಯಿಂದ ನಡೆಸುಕೊಳ್ಳುವುದು ಎಂಬರ್ಥವಿದೆ. ಹನ್ನೆರಡನೆಯ ಶತಮಾನದ ಸಾಮಾಜಿಕ ಕ್ರಾಂತಿಯಲ್ಲಿ ತ್ರಿಕರಣಪೂರ್ವಕವಾಗಿ ಅರ್ಪಿಸಿಕೊಂಡ ವಚನಕಾರರು ಜನರನ್ನು ಜಾಗೃತಗೊಳಿಸಲು ಪ್ರಯತ್ನಿಸಿದರು. ವಚನಗಳು ಗಾತ್ರ,ಸತ್ವ, ಮೌಲ್ಯ, ವಿವೇಚನೆ– ಈ ಎಲ್ಲವೂಗಳ ದೃಷ್ಟಿಯಿಂದಲೂ ಸಮಷ್ಟಿ ಪ್ರಜ್ಞೆಯನ್ನು ಒಳಗೊಂಡು ರೂಪಿತವಾಗಿದೆ. ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಪದ್ಯವೂ ಅಲ್ಲದ, ಗದ್ಯವೂ ಅಲ್ಲದ ನಿರ್ಬಂಧಿತ ಲಯ ವಿನ್ಯಾಸವಿಲ್ಲದ ವಿಶೇಷ ರಚನೆಯೇ ವಚನ ಸಾಹಿತ್ಯ. ಡಾ.ಚಿದಾನಂದಮೂರ್ತಿ ಅವರು "ವಚನ ಎನ್ನುವುದು ಕನ್ನಡದಲ್ಲಿ ವಿಶಿಷ್ಟ ಸಾಹಿತ್ಯ ಪ್ರಕಾರವೊಂದರ ಹೆಸರು.ಅನ್ಯಭಾಷೆಗಳ ಯಾವುದೇ ಮಾದರಿಯನ್ನು ಅನುಕರಿಸದೆ ಅಥವಾ ಆದರ್ಶವಾಗಿಟ್ಟುಕೊಳ್ಳದೆ ಕೇವಲ ಅನುಭವದಿಂದಲೇ ಮೂಡಿ ರೂಪಿತವಾದ ಈ ಪ್ರಕಾರವೂ ಕನ್ನಡದ ಹೆಮ್ಮೆಯಾಗಿದೆ. ವಿಶ್ವಸಾಹಿತ್ಯಕ್ಕೆ ಕನ್ನಡವು ಸಲ್ಲಿಸಿರುವ ಕಾಣಿಕೆಯಾಗಿದೆ" ಎಂದಿದ್ದಾರೆ.

ವಚನಗಳಲ್ಲಿ ಗುರು ಶಿಷ್ಯ ಸಂಬಂಧವು ತನ್ನ ಸೀಮಿತ ಅರ್ಥವ್ಯಾಪ್ತಿಯನ್ನು ಮೀರಿ ಕಂಡುಬರುತ್ತದೆ. ವಚನಗಳಲ್ಲಿ ಗುರು–ಲಿಂಗ–ಜಂಗಮ ಪರಿಕಲ್ಪನೆಯು ಬಹಳ ಮುಖ್ಯವಾಗಿ ಕಂಡುಬಂದಿದೆ. ಗುರು ಶಿಷ್ಯ ಪರಂಪರೆಯು ಭಾರತೀಯ ಸಂಸ್ಕೃತಿಯ ಒಂದು ವಿಶಿಷ್ಟ ಅಂಗ. ವಚನ ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿರುವಂತೆ ಗುರು, ಗುರುವಿನ ವ್ಯಕ್ತಿತ್ವ, ಗುರುವಿನ ಮಹತ್ವ ಕುರಿತಾಗಿ ಅನೇಕ ವಚನಗಳನ್ನು ಕಾಣಬಹುದು. ಸಂಸ್ಕೃತದಲ್ಲಿ 'ಗು' ಅಂದರೆ ಅಂಧಕಾರ ಮತ್ತು 'ರು' ಅಂದರೆ ಬೆಳಕು. ಅಂದರೆ ಒಂದು ನಿರ್ಧಿಷ್ಟ ವಿಭಾಗದಲ್ಲಿ ಹೆಚ್ಚಿನ ಜ್ಞಾನ, ಬುದ್ಧಿವಂತಿಕೆ ಮತ್ತು ನಿಪುಣತೆಯನ್ನು ಹೊಂದಿರುವ ಮತ್ತು ಇತರರಿಗೆ ನಿರ್ದೇಶನವನ್ನು ನೀಡುವಲ್ಲಿ ಈ ಎಲ್ಲಾ ಬುದ್ಧಿವಂತಿಕೆಗಳನ್ನು ಬಳಸುವ ವ್ಯಕ್ತಿಯೇ ಗುರು. ಉತ್ತಮ ಗುರುವನ್ನು ಪಡೆದುಕೊಳ್ಳುವುದು ಆತ್ಮಜ್ಞಾನವನ್ನು ಹೊಂದಲು ಒಂದು ಪೂರ್ವತಯಾರಿ ಎಂದು ಹೇಳಬಹುದು. ರಾಮಕೃಷ್ಣ ಆಶ್ರಮದ ಸ್ವಾಮಿ ಪುರುಷೋತ್ತಮಾನಂದರು ಹೇಳುವಂತೆ "ಕಲಿಯಲು ಉತ್ಸಾಹ ಉಳ್ಳವರೇ ಕಲಿಸಲು ಯೋಗ್ಯರು". ಗುರು ಶಿಷ್ಯ ಪರಂಪರೆಗೆ ನಮ್ಮ ಹಿರಿಯರು ಉನ್ನತವಾದ ಸ್ಥಾನವನ್ನು ನೀಡಿ ಗೌರವಿಸುತ್ತಾ ಬಂದಿರುವುದನ್ನು ಕಾಣಬಹುದು. ಯಮ–ನಚಿಕೇತ, ದ್ರೋಣ–ಅರ್ಜುನ, ವಿಶ್ವಾಮಿತ್ರ–ರಾಮ, ರಾಮಕೃಷ್ಣ–ವಿವೇಕಾನಂದ, ವಲ್ಲಭಚಾರ್ಯ–ಸೂರದಾಸ, ಅನಿಮಿಷಯೋಗಿ–ಅಲ್ಲಮಪ್ರಭು, ಜಾತವೇದಮುನಿ–ಬಸವಣ್ಣ, ಅಲ್ಲಮ–ಸಿದ್ಧರಾಮ, ಗೋವಿಂದಗುರು–ಶಿಶುನಾಳ ಷರೀಫ, ಹೀಗೆ ಇನ್ನು ಪಟ್ಟಿ ಮಾಡುತ್ತಾ ಹೋಗಬಹುದು.

ಕುವೆಂಪು ಶಿಷ್ಯರಾದ ಜಿ.ಎಸ್.ಶಿವರುದ್ರಪ್ಪನವರು ಹೇಳಿರುವ " ಎನಿತು ಜನ್ಮದಲಿ ಎನಿತು ಜೀವರಿಗೆ ನಾವು ಋಣಿಯೋ ತಿಳಿದು ನೋಡಿದರೆ ಬಾಳು ಎಂಬುದದು ಋಣದ ರತ್ನ ಗಣಿಯೋ" ಎನ್ನುವಂತೆ ವಿದ್ಯೆ ಕಲಿಸಿದ ಗುರುವನ್ನು ಪ್ರತಿಯೊಬ್ಬರು ಗೌರವಿಸುತ್ತಾ ಬಂದಿದ್ದಾರೆ. ವಚನಕಾರರು ಗುರು ತ್ರಿವಿಧವೆಂದು ಗುರುತಿಸುತ್ತಾ ದೀಕ್ಷಾಗುರುವಾದವರು ತಮ್ಮ ಶಿಷ್ಯರಿಗೆ ಕರುಣೆಯಿಂದ ಲಿಂಗದೀಕ್ಷೆಯನ್ನು ನೀಡಿ ನೈತಿಕ ನಿಯಮಗಳನ್ನು ಪಾಲಿಸುತ್ತಾ ಆಚಾರಚವನ್ನು ಬೋಧಿಸುತ್ತಾರೆ.

ಅಡ್ಡ ಬಿದ್ದು ಶಿಷ್ಯರ ಮಾಡಿಕೊಂಬ
ದಡ್ಡ ಪ್ರಾಣಿಗಳನೇನಂಬೆನಯ್ಯಾ
ಏನೇನೂ ಅರಿಯದ ಎಡ್ಡ ಮಾನವರಿಗೆ
ಉಪದೇಶವ ಮಾಡುವ ಗೊಡ್ಡ ಮಾನವನ ಮುಖವ ತೋರಸಿರಯ್ಯ
ಇಂತಪ್ಪ ಗುರು ಶಿಷ್ಯರೀರ್ವರು ಅಜ್ಞಾನಿಗಳು

ಅವರು ಇಹಲೋಕ ಪರಲೋಕಕ್ಕೆ ಹೊರಗೆಂದಾತನಂಬಿಗ
ಚೌಡಯ್ಯ

ಈ ಮೇಲಿನ ವಚನದಲ್ಲಿ ಗುರು ಶಿಷ್ಯರಿಬ್ಬರು ಹೇಗಿರಬೇಕು ಎಂಬುದನ್ನು ಕುರಿತಾಗಿ ಹೇಳೀರುವುದನ್ನು ಕಾಣಬಹುದು. ಗುರು ತನ್ನ ನಿಷ್ಪ್ರಯೋಜಕ ಶಿಷ್ಯನನ ಕುರಿತಾಗಿ ಈ ರೀತಿ ಹೇಳಿರುವುದನ್ನು ಚೌಡಯ್ಯನವರು ವಿಶ್ಲೇಸಿರುವ ಪರಿಯಿದು. ಮೇಲಿನ ಮಾತುಗಳಲ್ಲಿ ಸಹನೆ ಮೀರಿದ ತನ್ನ ಅಭಿವ್ಯಕ್ತಿಗೆ ನಿಷ್ಕರುಣೆಯಿಂದ ಹೇಳಿರುವುದು.

ಬಸವಣ್ಣನವರು ವಚನ ಸಾಹಿತ್ಯದಲ್ಲಿ ಅನೇಕ ವಚನಕಾರರಿಗೆ ಗುರುವಾಗಿದ್ದವರು. ಗುರುವಿನ ಕುರಿತಾಗಿ ಅನೇಕ ವಚನಗಳಲ್ಲಿ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ.

ಗುರು ವಚನವಲ್ಲದೆ ಲಿಂಗವೆನಿಸದು
ಗುರು ವಚನವಲ್ಲದೆ ನಿತ್ಯವೆಂದೆನಿಸದು
ಗುರು ವಚನವಲ್ಲದೆ ನೇಮವೆಂದೆನಿಸದು
ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟುವ ಉಭಯ ಭ್ರಷ್ಟರ
ಮೆಚ್ಚುವನೆ ನಮ್ಮ ಕೂಡಲಸಂಗಮದೇವ?

ಗುರುವಿನ ಮಹತ್ವವನ್ನು ತಿಳಿಸಿರುವ ವಚನವಿದು. ಗುರುವಿದ್ದರೆ ತಾನೆ ನಮಗೆ ದೀಕ್ಷೆ ದೊರೆಯುವುದು. ಹಾಗೇಯೇ ಗುರುವಿದ್ದರೆ ತಾನೆ ಸಾಧನೆ ಸಾಧ್ಯವಾಗುವುದು. ಆತ್ಮಲಿಂಗವು ಶಿವಸಾಕ್ಷಾತ್ಕಾರದ ಸಾಧನೆಯ ಮೂಲವಾಗಿ ನಾವು ಕಟ್ಟಿಕೊಳ್ಳಬೇಕು. ಈ ಆತ್ಮಲಿಂಗವನ್ನು ನಮಗೆ ಅನುಗ್ರಹಿಸುವವನೆ ಗುರು. ಗುರು ಕಾರುಣ್ಯವಿದ್ದರೆ ಅದುವೇ ಸದಾಚಾರ, ಶಿವಾಚಾರ, ಪ್ರಸಾದ ಸಂತೃಪ್ತಿ. ಗುರುವಿನ ಮೂಲಕವಾಗಿ ಅನುಗ್ರಹಿತವಾದರೆ ಅದುವೇ ಇಷ್ಟಲಿಂಗವಾಗುವುದು. ಆಗ ಮಾತ್ರ ಲಿಂಗಪೂಜೆಯು ನಿತ್ಯ ಲಿಂಗಾರ್ಚನೆ ಎನಿಸಿಕೊಳ್ಳುವುದು. ಗುರುವಿನ ಸನಿಹದಲ್ಲಿ ಕಲಿತು ಆಚರಣೆ ಮಾಡಿದರೆ ನೇಮವಾಗುವುದು. ತಲೆಯಿಲ್ಲದ ಮುಂಡಕ್ಕೆ ಯಾರಾದರೂ ಪಟ್ಟ ಕಟ್ಟುತ್ತಾರೆಯೇ? ಎಂದು ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ. ಕೊನೆಯ ಸಾಲುಗಳಲ್ಲಿ ವಿದ್ಯೆಯ ಮಹತ್ವವನ್ನು ತಿಳಿಸಿಕೊಡುವುದರ ಜೊತೆಜೊತೆಗೆ ಗುರುವಿನ ಜವಾಬ್ದಾರಿಯನ್ನು ತಿಳಿಸಿಕೊಟ್ಟಿದ್ದಾರೆ. ಸೂರ್ಯ ಚಂದ್ರರ ಬೆಳಕಿನಲ್ಲಿ ಅಜ್ಞಾನದ ಕತ್ತಲನ್ನು ಹೋಗಲಾಡಿಸುವುದು ಅಸಾಧ್ಯ. ಆದರೆ ಗುರುವಿನ ಅನುಗ್ರಹವಿದ್ದರೆ ಹೃದಯದ ಒಳಗಿನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಸಾಧ್ಯ. ಮೇಲಿನ ಮಾತುಗಳನ್ನು ಗಮನಿಸಿದಾಗ ಗುರುವಿನ ಉಪದೇಶದ ಸಾರ್ಥಕತೆಯನ್ನು ವಿವೇಚನೆಯ ಹಿನ್ನಲೆಯಲ್ಲಿ ಹೇಳಿರುವುದು ಮುಖ್ಯವಾಗುತ್ತದೆ. “ಶಿವ ಪಥವನರಿಯದೆಡೆ ಗುರುಪದವೆ ಮೊದಲು” ಎಂದಿರುವ ಬಸವಣ್ಣನವರು ಗುರುವಿನ ಅನುಗ್ರಹದಿಂದ ದೊರೆಯುವ ಫಲ ಇಡೀ ಸಾಧನೆಯ ಮಾರ್ಗವನ್ನು ಸಾಗಿ ಸಿದ್ಧಿಲಭಿಸುವ ಸಾರ್ಥಕತೆ.

ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು, ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು; ಆಚಾರವೆಂಬ ಕಾಯಾಯಿತ್ತು:
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ:

ಇಡೀ ಸಾಧನೆಯ ಮಾರ್ಗವನ್ನು ಸಿದ್ಧಿಯ ನಿಲುವಲ್ಲಿ ಬಸವಣ್ಣನವರು ಅಡಕಗೊಳಿಸಿರುವುದನ್ನು ಈ ವಚನದಲ್ಲಿ ಕಾಣಬಹುದು. ಭಕ್ತಿಯ ಸಾಧನೆಗೆ ಆಧಾರಭೂತವಾದ ಭೂಮಿಯಲ್ಲಿ ಗುರುವಿನ ಅನುಗ್ರಹ ಕುಡಿಯೊಡೆಯುತ್ತದೆ. ಅದರಲ್ಲಿ ವಿಚಾರವೆಂಬ ಹೂವು, ಆಚಾರವೆಂಬ ಕಾಯಿ – ಇವಗಳ ಸಮನ್ವಯತೆಯನ್ನು ಕಾಣಬಹುದಾಗಿದೆ. ಬುದ್ಧಿಗೆ ಅತೀತವಾದ ನಿಷ್ಪತ್ತಿ ಗುರುವಿನ ಮೂಲಕ ಸಾರ್ಥಕತೆಯನ್ನು ಪಡೆಯುತ್ತದೆ. ಹೀಗೆ ಗುರುವಿನ ಮೂಲಕ ಶಿಷ್ಯನಾದವನು ಒಳ್ಳೆಯ ಫಲವನ್ನು ಪಡೆದು ಸಾರ್ಥಕತೆಯನ್ನು ಕಂಡುಕೊಳ್ಳುತ್ತಾನೆ.

ಚೆನ್ನಬಸವಣ್ಣನು ಬಸವಣ್ಣನ ಸೋದರಿ ಅಕ್ಕನಾಗಮ್ಮನ ಮಗ. ಗುರುವನ್ನು ಕುರಿತಾಗಿ ಹೇಳಿರುವ ವಚನ

ಗುರು ಕರುಣಿಸೆ ಬಿಟ್ಟಿತ್ತು ಮಾಯೆ
ಗುರು ಕರುಣಿಸೆ ಬಿಟ್ಟಿತ್ತು ಮರವೆ
ಗುರು ಕರುಣಿಸೆ ಬಿಟ್ಟಿತ್ತು ಪ್ರಪಂಚ
ಕೂಡಲ ಚೆನ್ನಸಂಗಮದೇವಾ
ಗುರು ಕರುಣಿಸೆ ಬಿಟ್ಟಿತ್ತು ಎನ್ನ ಕರ್ಮಪಾಶ

ಗುರುವೆಂದರೆ ಮನುಷ್ಯನ ಮನಸ್ಸಿನೊಳಗೆ ಮುಸುಕಿರುವ ಅಜ್ಞಾನವೆಂಬ ಅಂಧಕಾರವನ್ನು ಅಳಿಸುವ ಮಹಾನ್ ಶಕ್ತಿ. ಮೋಹದ ಬಲೆಯಲ್ಲಿ ಬಿದ್ದು ಒದ್ದಾಡುತ್ತಿರುವ ಮನುಷ್ಯನನ್ನು ಹೊರತೆಗೆಯುವ ಮಹಾಕರುಣೆ. ಗುರುವೆಂದರೆ ಅರಿವಿನ ಪರಿಚಯ ಮಾಡಿಕೊಡುವ ಸಾಮರ್ಥ್ಯವುಳ್ಳವನು. ಗುರುವೆಂದರೆ ತನ್ನೊಳಗಿನ ಅರಿವನ್ನು ಅರಿತವನು.ನಮ್ಮ ದೇಶದಲ್ಲಿ ಗುರುವಿಗೆ ಬಹು ದೊಡ್ಡ ಸ್ಥಾನಮಾನ, ಗೌರವವಿದೆ. ಶಾಸ್ತ್ರಗ್ರಂಥಗಳಲ್ಲಿ ಗುರುವನ್ನು ಕುರಿತು ಸಾಕ್ಷಾತ್ ಪರಬ್ರಹ್ಮ ಎಂದು ಸಾರಿದ್ದಾರೆ.

ಮನಸ್ಸನ್ನು ಚಂಚಲಗೊಳಿಸಿ, ಆಸೆಗಳ ಪಾಶದಲಿ ಕದಡಿ, ಮನುಷ್ಯನನ್ನು ದಾರಿ ತಪ್ಪಿಸುವುದು ಮಾಯೆ. ಗುರುವಿನ ಕರುಣೆ ಈ ಮಾಯೆಯನ್ನು ಬಿಡಿಸುತ್ತದೆ. ಮರವೆ ನಮ್ಮೊಳಗೆ ಅಧಿಕವಾಗಿದೆ. ನಮ್ಮನ್ನು ನಮ್ಮಿಂದ ಮರೆಸಿದ ಮಾಯೆ. ಈ ಮರೆವು ಕೂಡ ಗುರುವಿನ ಕರುಣೆಯಿಂದ ಬಿಟ್ಟೋಡುತ್ತದೆ. ಗುರುವಿನ ಕರುಣೆಯು ನಮ್ಮೊಳಗೆ ತುಂಬಲು ಆರಂಭಿಸಿದಾಗ ನಮ್ಮನು ಸುತ್ತಿರುವ, ಮುತ್ತಿರುವ ಈ ಪ್ರಪಂಚವು ಮರೆಯಾಗುತ್ತದೆ. ಹೆಂಡತಿ, ಮಕ್ಕಳು,ಹೊಲ,ಮನೆ,ಬಂಧುಬಳಗ– ಎಲ್ಲವೂ ನಮ್ಮನ್ನು ಸುತ್ತಿಕೊಂಡಿವೆ. ಕರ್ಮಪಾಶದಿಂದ ಬಂಧಿತವಾಗಿರುವ ಮನುಷ್ಯನನ್ನು ಮುಕ್ತಿಗೊಳಿಸಲು ಗುರುವಿನಿಂದ ಮಾತ್ರ ಸಾಧ್ಯ. ಶ್ರೀಗುರುವಿನ ಮಹಾಕರುಣೆ ಇದ್ದು, ಗುರುವನ್ನು ನಂಬಿ ನೆಚ್ಚಿ, ಭಕ್ತಿಯಿಂದ ಸೇವೆ ಮಾಡಿದರೆ ಆಗ ಈ ಮಾಯಾಪ್ರಪಂಚವನ್ನು ಗೆಲ್ಲಲು ಸಾಧ್ಯವಾಗುತ್ತದೆ. ಭಕ್ತನ ಅಂತರಂಗದ ಕತ್ತಲೆಯನ್ನು ಬೆಳಗಬಲ್ಲವನೆ ನಿಜವಾದ ಗುರು. ಈ ರೀತಿ ಜ್ಞಾನದ ಬೆಳಕನ್ನು ಸದಾ ಶಿಷ್ಯಸಮೂಹಕ್ಕೆ ನೀಡಿದಾಗ ಗುರು ಪದವಿಗೂ ಬೆಲೆ ಬರುತ್ತದೆ.

ಗುರುವಿನ ಮಹತ್ವವನ್ನು, ಶಿಷ್ಯನ ಗುರುತ್ವವನು
ಆರಯ್ಯ ಬಲ್ಲವರು?
ಗುರು ಶಿಷ್ಯನಾದ ಪರಿಯನು, ಶಿಷ್ಯ ಗುರುವಾದ ಪರಿಯನು
ಆರಯ್ಯ ಬಲ್ಲವರು?

ಮೇಲಿನ ವಚನದಲ್ಲಿ ಶಿಷ್ಯನೆ ಗುರುವಾದ ಪರಿಯನ್ನು ಉರಿಲಿಂಗಪೆದ್ದಿ ಚೆನ್ನಾಗಿ ಅರ್ಥೈಯಿಸಿ ಹೇಳಿದ್ದಾನೆ. ಬೀಜ ವೃಕ್ಷ ನ್ಯಾಯದಂತೆ ಅವಿನಾಭಾವವಾದದ್ದು. ನಮ್ಮ ಪರಂಪರೆಯಲ್ಲಿ ಗುರುವಿನಿಂದ ವಿದ್ಯೆ ಕಲಿತು ಗುರುವನ್ನು ಮೀರಿಸಿರುವ ಉದಾಹರಣೆಗಳು ಸಾಕಷ್ಟಿವೆ.

ಅಲ್ಲಮನು ಬೆಡಗಿನ ವಚನಗಳ ಮೂಲಕವಾಗಿ ಮಗುವಿನ ವಿಕಾಸದ ಹಂತಗಳನ್ನು ಕುರಿತಾಗಿ ಚೆನ್ನಾಗಿ ಹೇಳಿದ್ದಾರೆ. ಗುರು ಶಿಷ್ಯ ಸಂಬಂಧವನ್ನು ಹನ್ನೆರಡನೆಯ ಶತಮಾನದಲ್ಲಿಯೇ ಈ ರೀತಿಯಾಗಿ ತಿಳಿಹೇಳಿದ್ದಾರೆ. ಮೇಲುನೋಟಕ್ಕೆ ಈ ವಚನವು ಸುಲಭವಾಗಿ ಅರ್ಥೈಯಿಸುವಂತೆ ಕಂಡರೂ ಒಳಾರ್ಥವು ಶೈಕ್ಷಣಿಕ ಮನೋವಿಜ್ಞಾನಿಯ ರೀತಿಯಲ್ಲಿ ವಿಶ್ಲೇಷಿಸಿರುವುದನ್ನು ಗಮನಿಸಬಹುದಾಗಿದೆ.

ಕೃತಯುಗದಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದನಯ್ಯ
ತ್ರೇತಾಯುಗದಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ

ಆಗಲಿ ಮಹಾಪ್ರಸಾದವೆಂದನಯ್ಯ
ದ್ವಾಪರಯುಗದಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದನಯ್ಯ
ಕಲಿಯುಗದಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದನಯ್ಯ
ಗುಹೇಶ್ವರ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ಆನು ಬೆರಗಾದೆನು.

ಇಲ್ಲಿ ಬಳಕೆಯಾಗಿರುವ ಯುಗಗಳ ಚಿತ್ರಣವು ಮಗುವಿನ ವಿಕಾಸದ ಬೆಳವಣಿಗೆಯ ಹಂತಗಳನ್ನು ಕುರಿತು ಹೇಳಿರುವುದಾಗಿದೆ. ಒಂದೊಂದು ಯುಗವನ್ನು ಮಗುವಿನ ಬಾಲ್ಯಕ್ಕೆ ಹೋಲಿಸಲಾಗಿದೆ. ಶೈಶಾವಾವಸ್ಥೆಯಲ್ಲಿ ಮಗುವಿಗೆ ಬುದ್ದಿ ಕಲಿಸಬೇಕಾದಾಗ ಬಡಿದು ಬುದ್ಧಿಯನ್ನು ಕಲಿಸಬೇಕಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಕಲಿಕೆಯ ವಿಧಾನವು ಯಾವ ರೀತಿಯಲ್ಲಿ ಇರುತ್ತದೆ ಎಂದು ತಿಳಿಸಿದ್ದಾರೆ. ಶೈಶಾವದಿಂದ ಬಾಲ್ಯಕ್ಕೆ ಬಂದಾಗ ಬೈದು ಬುದ್ಧಿಯನ್ನು ಕಲಿಸಬೇಕಾಗುತ್ತದೆ. ಬಾಲ್ಯಾವಸ್ಥೆಯನ್ನು ದಾಟಿ ಪ್ರೌಢಾವಸ್ಥೆಗೆ ಬಂದಾಗ ಹೆದರಿಸಿ ಬುದ್ಧಿಯನ್ನು ಕಲಿಸಬೇಕು. ಪ್ರೌಢಾವಸ್ಥೆಯ ನಂತರದಲ್ಲಿ ಯೌವನಾವಸ್ಥೆಗೆ ಕಾಲಿಟ್ಟಾಗ ಪ್ರೀತಿಯ, ಸ್ನೇಹದ ಮಾತುಗಳಿಂದ ಬುದ್ಧಿಯನ್ನು ಕಲಿಸುವುದು ಮುಖ್ಯವಾಗಿರುತ್ತದೆ. ಇಲ್ಲಿ ಕಲಿಯಬೇಕಾಗಿರುವ ಶಿಷ್ಯನನ್ನು ಗುರುವು ಕಾಲಕ್ಕೆ ತಕ್ಕಂತೆ ಸಿದ್ಧವಾಗಿಸಿಕೊಂಡು ಬುದ್ಧಿ ಹೇಳಬೇಕಾಗಿದೆ ಎಂದು ಬೆಡಗಿನ ಮೂಲಕವಾಗಿ ಈ ವಚನದ ಮುಖಾಂತರ ಕಟ್ಟಿದ್ದಾರೆ.

ಗುರುವಿನ ಕರುಣೆಯಿಂದ ಲಿಂಗ ಜಂಗಮವ ಕಂಡೆ!
ಗುರುವಿನ ಕರುಣೆಯಿಂದ ಪಾದೋದಕ ಪ್ರಸಾದವ ಕಂಡೆ!
ಗುರುವಿನ ಕರುಣೆಯಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ!
ಚೆನ್ನಮಲ್ಲಿಕಾರ್ಜುನಯ್ಯ
ನಾ ಹುಟ್ಟಲೊಡನೆ ವಿಭೂತಿಯ ಪಟ್ಟವ ಕಟ್ಟಿ
ಸದ್ಗುರುಸ್ವಾಮಿ ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆನು!

ಅಕ್ಕಮಹಾದೇವಿಯು ಮೇಲಿನ ವಚನದಲ್ಲಿ ಶಿವನನ್ನೆ ತನ್ನ ಗುರುವೆಂದು ಭಾವಿಸಿಕೊಂಡು, ಶಿವಕಾರುಣ್ಯದಿಂದ ಎಲ್ಲವೂ ಲಭಿಸುವುದೆಂದು ನಂಬಿರಯವ ಬಗೆಯನ್ನು ವ್ಯಕ್ತಪಡಿಸುತ್ತದೆ. ಅಕ್ಕ ಶಿವನನ್ನು ಪ್ರಶ್ನಿಸುತ್ತಾ 'ಎನ್ನಲ್ಲಿ ಏನುಂಟೆಂದು ಕರಸ್ಥಲವನ್ನು ಇಂಬುಗೊಂಡೆ' ಎಂದು ಕೇಳಿರುವ ವಚನವನ್ನು ಗಮನಿಸಬಹುದು. ಶ್ರೀ ಗುರುವಾದ ಶಿವನ ಕರುಣದಿಂದ ಅಕ್ಕಮಹಾದೇವಿಯು ಪಡೆದ ಜ್ಞಾನ, ವಿದ್ಯೆಯ ಜೊತೆಗೆ ಅನುಭವಮಂಟಪದಲ್ಲಿ ಗುರುವಾದ ಬಸವಣ್ಣ, ಅಲ್ಲಮನಂತಹ ಜ್ಞಾನಿಗಳ ವಿಚಾರವನ್ನು ಕಾಣಲು ಶಿವಪ್ರಸಾದದಿಂದ ಸಾಧ್ಯವಾಯಿತು ಎಂದು ಹೇಳುತ್ತಾ, ತನ್ನ ಆಧ್ಯಾತ್ಮ ಜ್ಞಾನಿಯಾದ ಶಿವನನ್ನು ಇಲ್ಲಿ ಗುರುವಿಗೆ ಹೋಲಿಸಿದ್ದಾಳೆ. ಅಲ್ಲಮ, ಬಸವಣ್ಣನಂತಹ ಅನುಭಾವಿಗಳ ಸಂಸರ್ಗ ಅಕ್ಕನ ಬದುಕಿನಲ್ಲಿ ಎಷ್ಟೇಲ್ಲಾ ಬದಲಾವಣೆಗೆ ಕಾರಣವಾಯಿತು. ಜೊತೆಗೆ ಏನೆನಲ್ಲಾ ಪಡೆಯಲು ಶಕ್ತವಾಯಿತು ಎಂಬುದನ್ನು ಈ ಮೇಲಿನ ವಚನದಲ್ಲಿ ಮನಗಾಣಬಹುದು.

**ಪರಾಮರ್ಶನ ಗ್ರಂಥಗಳು**

1. ಸಂಕೀರ್ಣ ವಚನ ಸಂಪುಟ ಒಂದು : ಸಂ: ಎಂ.ಎಂ.ಕಲಬುರ್ಗಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001
2. ಕನ್ನಡ ಸಾಹಿತ್ಯ ಚರಿತ್ರೆ : ಡಾ.ಎಚ್.ನಂಜೇಗೌಡ ಚೇತನ ಬುಕ್ ಹೌಸ್ ಮೈಸೂರು
3. ಕಾಯದ ಕಳವಳ : ಸಂ.ಡಾ.ಸಿ.ಡಿ.ಪರಶುರಾಮ ಪದ್ಮಶೇಖರ್ ಪ್ರಿಂಟರ್ಸ್ ಮೈಸೂರು
4. ಕರ್ನಾಟಕ ಶರಣ ಕಥಾಮೃತ : ಡಾ.ಎಚ್.ತಿಪ್ಪೇರುದ್ರಸ್ವಾಮಿ ಜಿ.ಎಚ್.ರಾಮರಾವ್ ಮೈಸೂರು ಪ್ರಿಂಟರ್ಸ್ & ಪಬ್ಲಿಷರ್ ಹೌಸ್ ಮೈಸೂರು